O.S.No.:337/2016
P.W.:1

ಈ ದಿನ ದಿ:09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- 7ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಆರ್.ಕೆ ರವರಿಂದಃ-</u>**

1. ನನಗೆ ಈಗ 44ವರ್ಷ ವಯಸ್ಸಾಗಿರುತ್ತದೆ. ನಾನು ಹುಟ್ಟಿ ಬೆಳೆದಿದ್ದು ಕೋಡಿಹಳ್ಳಿ ಗ್ರಾಮದಲ್ಲಿ. ನಾನು 9ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ನಾನು ಶಾಲೆಯ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮದುವೆಯನ್ನು ನನ್ನ ತಾಯಿಯೇ ಮುಂದೆ ನಿಂತು ಮಾಡಿರುತ್ತಾರೆ. 1ನೇ ಪ್ರತಿವಾದಿ ನನ್ನ ಮದುವೆಗೆ ಬಂದಿರಲಿಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರು ರಾಮಚಂದ್ರಮ್ಮ. ನನ್ನ ತಾಯಿಯ ಮದುವೆಯು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. 1ನೇ ಪ್ರತಿವಾದಿಯೊಂದಿಗೆ ನನ್ನ ತಾಯಿಯ ಮದುವೆ ಆಗಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ.

2. ನನ್ನ ತಾಯಿಗೂ 1ನೇ ಪ್ರತಿವಾದಿಗೂ ಮದುವೆ ಆಗಿರಲಿಲ್ಲ, ನಾನು 1ನೇ ಪ್ರತಿವಾದಿಯ ಮಗಳೆ ಅಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇದ್ದರಾ ಎಂದರೆ ಸಾಕ್ಷಿಯು ಇರುತ್ತಾರೆ, ಅವರ ಹೆಸರು ಶಾಂತಮ್ಮ ಎಂದು ನುಡಿಯುತ್ತಾರೆ. ಶಾಂತಮ್ಮ ರವರಿಗೆ ಒಟ್ಟು ಮೂರು ಜನ

ಮಕ್ಕಳು, ಅವರುಗಳೆಂದರೆ ರಮೇಶ, ಪ್ರಕಾಶ ಮತ್ತು ಗೀತಾ ಎಂದು ಇರುತ್ತಾರೆ. ಸಾಕ್ಷಿಯು ಮುಂದುವರೆದು ಅವರುಗಳ ಪೈಕಿ ರಮೇಶ ಎನ್ನುವವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

3. ನಾನು ಹುಟ್ಟಿದ್ದು ಕೋಡಿಹಳ್ಳಿಯಲ್ಲಿ, ಅಲ್ಲಿ 5-6ವರ್ಷಗಳ ಕಾಲ ಇದ್ದೆ. ಆಮೇಲೆ ನಾನು ಕನಕಪುರದ ಕುರುಪೇಟೆಗೆ ಬಂದೆ ಎಂದರೆ ಸರಿ. ಕನಕಪುರದಲ್ಲಿ ನನ್ನನ್ನು ನನ್ನ ಅಜ್ಜಿ ನನ್ನ ಅಜ್ಜ ಅಂದರೆ ನನ್ನ ತಾಯಿಯ ತಂದೆ ತಾಯಿ ರವರು ನೋಡಿಕೊಂಡಿರುತ್ತಾರೆ. ನಾನು ಕನಕಪುರಕ್ಕೆ ಬಂದನಂತರದಿಂದ ನನಗೂ 1ನೇ ಪ್ರತಿವಾದಿಗೂ ಯಾವುದೇ ಪ್ರಕಾರದ ಸಂಪರ್ಕ ಇರಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ಹೋಗಿ ಬಂದು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

4. ಈ ದಾವೆಯನ್ನು ನಾನು ಒಟ್ಟು 4ಆಸ್ತಿಗಳಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ದಾವಾಸ್ವತ್ತುಗಳ ಸರ್ವೆ ನಂ.160ರಲ್ಲಿ 16ವರೆ ಗುಂಟೆ ಜಮೀನು, ಸರ್ವೆ ನಂ.161/1ರಲ್ಲಿ 1ಎಕರೆ 13 ಗುಂಟೆ, ಸರ್ವೆ ನಂ.165ರಲ್ಲಿ 28ವರೆ ಗುಂಟೆ ಮತ್ತು ಸರ್ವೆ ನಂ.166/1ರಲ್ಲಿ 1ಎಕರೆ 11ವರೆ ಗುಂಟೆ ಜಮೀನು ಇರುತ್ತದೆ. ಸರ್ವೆ ನಂ.160ರ ಪೂರ್ವಕ್ಕೆ ಕೋಮತಿ ಸಾಹೇಬರ ಜಮೀನು, ಪಶ್ಚಿಮಕ್ಕೆ ಮಾಸ್ಟರ್ ರವರ ಜಮೀನು, ಉತ್ತರಕ್ಕೆ ಕುಮಾರಣ್ಣ ರವರ

ಜಮೀನು ಮತ್ತು ದಕ್ಷಿಣಕ್ಕೆ ಚಿಕ್ಕಸ್ವಾಮಿ ರವರ ಜಮೀನು ಬರುತ್ತದೆ. ಸರ್ವೆ ನಂ.165ರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಶಿವಣ್ಣ ರವರ ಜಮೀನು, ಉತ್ತರಕ್ಕೆ ಚಿಕ್ಕಸ್ವಾಮಿ ರವರ ಜಮೀನು ಮತ್ತು ದಕ್ಷಿಣಕ್ಕೆ ಕುಮಾರಣ್ಣ ರವರ ಜಮೀನು ಬರುತ್ತದೆ. ನಾನು ದಾವಾಸ್ವತ್ತುಗಳನ್ನು ನೋಡಿರುತ್ತೇನೆ. ಸರ್ವೆ ನಂ.166/1ರ ಪೂರ್ವಕ್ಕೆ ಮಹಮ್ಮದ್ ಅಜೀಜ್ ರವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ದೊಡ್ಡಬಡ್ಲಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ಬಿ.ರಘು ರವರ ಜಮೀನು ಬರುತ್ತದೆ.

5. ನಾನು ದಾವಾಸ್ವತ್ತುಗಳ ಚಕ್ಕುಬಂದಿಗಳನ್ನು ತಪ್ಪು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣ ಹೊಂದಿ 8ವರ್ಷಗಳಾಗಿರಬಹುದು. ನನ್ನ ತಾಯಿ ತಮ್ಮ ಜೀವಿತಾವಧಿಯಲ್ಲಿ ಜೀವನಾಂಶ ಕೋರಿ ಅಥವಾ ಆಸ್ತಿಗಳನ್ನು ಕೋರಿ 1ನೇ ಪ್ರತಿವಾದಿಯ ವಿರುದ್ದ ಯಾವುದೇ ಕೇಸು ಹಾಕಿಲ್ಲ. ನಾನು 1ನೇ ಪ್ರತಿವಾದಿಯ ಮಗಳು ಎಂದು ತೋರಿಸಲು ಪ್ರಮಾಣ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಅಧಿಕೃತ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

6. ದಾವಾಆಸ್ತಿ ಐಟಂ ನಂ.3 ಮತ್ತು 4ನ್ನು ದಿನಾಂಕ.02.09.2016ರಂದು 7ನೇ ಪ್ರತಿವಾದಿಯು 1 ರಿಂದ 6ನೇ ಪ್ರತಿವಾದಿಗಳಿಂದ ಖರೀದಿಸಿರುತ್ತಾರೆ ಎಂದರೆ ಸರಿ. ಖರೀದಿಯ ನಂತರ ದಾವಾಆಸ್ತಿ ಐಟಂ ನಂ3 ಮತ್ತು 4ರ ಖಾತೆಯು 7ನೇ

ಪ್ರತಿವಾದಿಯ ಹೆಸರಿಗೆ ಬದಲಾಗಿರುತ್ತದೆ ಮತ್ತು ಆ ಜಮೀನುಗಳಲ್ಲಿ ಅವರೆ ಸ್ವಾ ಧೀನದಲ್ಲಿರುತ್ತಾರೆ ಎಂದರೆ ಸರಿ. 2016ನೇ ಸಾಲಿಗಿಂತ ಮೊದಲು ಆಸ್ತಿಯಲ್ಲಿ ಭಾಗ ಕೇಳಲು ನಿಮಗೆ ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು 1ನೇ ಪ್ರತಿವಾದಿಗೆ ಪಾಲು ಕೇಳುತ್ತಲೆ ಇದ್ದೆ, ಅವರು ಕಾರಣಗಳನ್ನು ಹೇಳುತ್ತ ತಳ್ಳುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

7. 7ನೇ ಪ್ರತಿವಾದಿ ದಾವಾಆಸ್ತಿ ಐಟಂ ನಂ.3 ಮತ್ತು 4ನ್ನು ಖರೀದಿಸುವುದಕ್ಕೂ ಮೊದಲು ಆ ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅವರು ಪರಿಶೀಲಿಸಿರುತ್ತಾರೆ ಎಂದರೆ ಸರಿ. 7ನೇ ಪ್ರತಿವಾದಿಗೆ 1ನೇ ಪ್ರತಿವಾದಿ ಕೊಟ್ಟಂತಹ ವಂಶವೃಕ್ಷದಲ್ಲಿ ನನ್ನ ಹೆಸರು ನಮೂದು ಇರಲಿಲ್ಲ ಎಂದರೆ ಸಾಕ್ಷಿಯು ಅವರು ನನ್ನ ಹೆಸರನ್ನು ಅದರಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿ ಯಾವತ್ತು ನನ್ನನ್ನು ಪ್ರತಿವಾದಿಗಳ ಕುಟುಂಬದಲ್ಲಿ ನೋಡಿಯೇ ಇಲ್ಲ ಎಂದರೆ ಸರಿಯಲ್ಲ. 7ನೇ ಪ್ರತಿವಾದಿಯ ಹೆಸರಿಗೆ ಆದ ಖಾತೆಗಳ ವಿರುದ್ದ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ.

8. 7ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯಪತ್ರವನ್ನು ನಾನು ಈ ದಾವೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ದಾವೆ ಹೂಡುವ ಕಾಲಕ್ಕೆ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ, ನಾನು ನನ್ನ ತಂದೆಯ ವಿರುದ್ದ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು

ನುಡಿಯುತ್ತಾರೆ. ದಾವಾಸ್ವತ್ತುಗಳನ್ನು ಹೊರತುಪಡಿಸಿ 1ನೇ ಪ್ರತಿವಾದಿಯ ಹೆಸರಿಗೆ ಬೇರೆ ಆಸ್ತಿಗಳು ಇವೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿಗೆ ಒಂದು ಮನೆ ಸಹ ಇದೆ ಎಂದರೆ ಸರಿ. 1ನೇ ಪ್ರತಿವಾದಿಯ ಹೆಸರಿಗೆ ಇದ್ದ ಬೇರೆ ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ.

9. 7ನೇ ಪ್ರತಿವಾದಿ ದಾವಾಆಸ್ತಿ ಐಟಂ ನಂ.3 ಮತ್ತು 4ರ ಜಮೀನನ್ನು 1ನೇ ಪ್ರತಿವಾದಿಯಿಂದ ಖರೀದಿ ಮಾಡಿರುವ ಕಾರಣಕ್ಕೆ ಅವರು ಸದ್ಭಾವನ ಖರೀದಿದಾರರಾಗುತ್ತಾರೆ, ಹಾಗಾಗಿ ಸದರಿ ಖರೀದಿಯ ವ್ಯವಹಾರವನ್ನು ಪ್ರಶ್ನಿಸುವ ಅಧಿಕಾರ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಕುಟುಂಬದ ಸದಸ್ಯೆ ಅಲ್ಲದೆ ಇರುವ ಕಾರಣಕ್ಕೆ ದಾವಾಸ್ವತ್ತುಗಳಲ್ಲಿ ಪಾಲು ಕೇಳಲು ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**